ಮತ್ತೊಬ್ಬರು ಟೆಕ್ಸ್ಟ್ ಬುಕ್, ನೋಟ್ಸುಗಳನ್ನೆಲ್ಲಾ ಕೊಟ್ಟು ಹೋದರು. ಇನ್ನೊಬ್ಬರು ಬಂದು 'ಊಟ ಹಿಡಿಸಲಿಲ್ಲವೆಂದರೆ ಹೇಳಿ' ಎಂದು ಕಾಳಜಿ ತೋರಿದರೆ, ಕಿರೇಮಗಳೂರಿನ ಚಳಿಗೆ ಕೊಂಚ ತಡವಾಗಿ ಎದ್ದು ಕಾಲೇಜ್ ಬಸ್ಸು ತಪ್ಪಿಸಿಕೊಂಡಾಗ ಅರಿಹಂತ್ ತಮ್ಮ ಬೈಕಿನಲ್ಲಿಯೇ ಕಾಲೇಜ್ ಗೇಟಿನವರೆಗೆ ಬಿಟ್ಟು ಅಕ್ಕರೆ ತೋರಿದರು. ಅದಕ್ಕೆ ಪ್ರತಿಯಾಗಿ ಸಂದೀಪ 'ಥ್ಯಾಂಕ್ಸ್ ಅರಿಹಂತ್' ಎಂದು ಬೇರೆ ಹೇಳಿದ್ದ. ಕ್ರಿಕೆಟ್ ಆಡುವಾಗಲಂತೂ ತಮ್ಮನ್ನು ಬಾಲ್ ಬಾಯ್‌ಗಳನ್ನಾಗಿ ಇರಿಸಿಕೊಳ್ಳದೇ ಬ್ಯಾಟಿಂಗ್-ಬೌಲಿಂಗ್ ಎಲ್ಲಾ ಕೊಟ್ಟು ಸೀನಿಯರುಗಳು ಹುರಿದುಂಬಿಸಿದ್ದರು. ಮನೆಯಿಂದ ಹೊರಡುವಾಗ ಕಣ್ಣಂಚಿಗೆ ಬಂದಿದ್ದ ನೀರನ್ನು ಹೇಗೋ ಹಿಡಿದಿಟ್ಟುಕೊಂಡು ಮುಂದಿನ ಜೀವನ ಹೇಗಿರುತ್ತದೋ ಎಂದು ಆತಂಕಪಟ್ಟುಕೊಂಡಿದ್ದು ಎಂಥಾ ನಿಷ್ಕಾರಣ ಭಯವಾಗಿತ್ತು! ಖುಷಿಯಿಂದ ಮನೆಗೆ ಕರೆ ಮಾಡಿ ಹಾಸ್ಟೆಲ್ಲಿನ ಇಂಚಿಂಚನ್ನೂ ವಿವರಿಸಿದ್ದನ್ನು ಕೇಳಿ ಮಗೂಗೆ ಹೊಸಾ ಜಾಗ ಹಿಡ್ಸಿದೆ ಎಂದು ಅಮ್ಮ ಹೇಳಿದಾಗ ಸಂದೀಪನ ತುಟಿ ಕಿವಿಗಳನ್ನು ತಾಕುತ್ತಿತ್ತು. ಹಾಸ್ಟೆಲ್ಲಿನ ಗ್ರೌಂಡ್ ಫ್ಲೋರಿನಲ್ಲಿ ಒಟ್ಟು ಇಪ್ಪತ್ತೆರಡು ಕೋಣೆಗಳು. ಎಲ್ಲದರಲ್ಲಿಯೂ ಎರಡು, ಮೂರು ಮತ್ತು ನಾಲ್ಕನೇ ವರ್ಷದ ಇಂಜಿನಿಯರಿಂಗಿನ ವಿದ್ಯಾರ್ಥಿಗಳಿದ್ದರು, ಅಂದರೆ ಕೆಳಗಿನ ಮಹಡಿ ಸಂಪೂರ್ಣವಾಗಿ ಸೀನಿಯರುಗಳದ್ದಾಗಿತ್ತು. ಮೇಲಿನ ಮಹಡಿಯ ಒಟ್ಟು ಇಪ್ಪತ್ತೈದು ರೂಮುಗಳಲ್ಲಿ ಸಂದೀಪ ಮತ್ತು ಭರತನ ಕೋಣೆಯನ್ನು ಬಿಟ್ಟರೆ ಉಳಿದವು ಖಾಲಿಯೇ ಇದ್ದವು. ನಿಧಾನಕ್ಕೆ ಒಬ್ಬೊಬ್ಬರೇ ಫ್ರೆಶರ್ಸ್ ಹಾಸ್ಟೆಲ್ಲಿಗೆ ತಮ್ಮ ತಮ್ಮ ಗಂಟುಮೂಟೆಗಳನ್ನು ಹಿಡಿದುಕೊಂಡು ಬರಲಾರಂಭಿಸಿದರು. ಎರಡು ವಾರವಾಗುವಷ್ಟರಲ್ಲಿ ಮೇಲ್ಮಹಡಿಯ ಎಂಟು ಕೋಣೆಗಳು ಭರ್ತಿಯಾಗಿದ್ದವು. ಸ್ವಚ್ಛಂದವಾಗಿ ಹಾರಾಡುತ್ತಿದ್ದ ಮೇಲ್ಮಹಡಿಯ ಗಾಳಿಪಟದ ದಾರ ಕೆಳಮಹಡಿಯಲ್ಲಿದೆ ಎಂಬುದರ ಸುಳಿವು ಸಂದೀಪನಿಗೆ ಮೊದಲಿಗೆ ಸಿಕ್ಕಿದ್ದು, ನೋಂದಣಿ ಮಾಡಿಕೊಂಡಿದ್ದ ಹದಿನಾರೂ ಜನ ಜ್ಯೂನಿಯರುಗಳು ಹಾಸ್ಟೆಲ್ಲಿಗೆ ಬಂದ ಮಾರನೇ ದಿನವೇ.

ವೈದ್ಯರು ಸಂದೀಪನ ಕೈಯ ಗೀರುಗಳನ್ನು ನೋಡುತ್ತಾ 'ಎಲ್ಲಿಗ್ರೋದು?' ಎಂದರು. ಸಂದೀಪ ಈ ಲೋಕಾಭಿರಾಮದ ಪ್ರಶ್ನೋತ್ತರಗಳನ್ನು ಬೇಗ ಮುಗಿಸಿ ಮುಖ್ಯ ವಿಷಯಕ್ಕೆ ಬರೋಣವೆಂದು ಒಂದೇ ಉಸಿರಿಗೆ 'ಬ್ರಾಹ್ಮಣ್ರ ಹಾಸ್ಟೆಲ್ಲು, ಬೈಪಾಸ್ ರೋಡಲ್ಲಿದೆ, ಊರಿಂದ ಹೊರಗಿದೆ, ಹಂಗಾಗ್ ಜಾಸ್ತಿ ಜನಕ್ಕೆ ಗೊತ್ತಿಲ್ಲ, ಕಾಲೇಜಿಗ್ ಹತ್ರ ಆಗುತ್ತೆ, ನಾನ್ ಫಸ್ಟ್ ಇಯರ್‍ರ್ ಸೆಕೆಂಡ್ ಸೆಮಿಸ್ಟರ್‍ರ್, ಊಟ ಚೆನಾಗಿದೆ ಹಾಸ್ಟೆಲಲ್ಲಿ' ಎಂದು ಹೇಳಿ ಮುಗಿಸಿದ. ವೈದ್ಯರು ಅನುಮಾನದಲ್ಲಿ ಅವನತ್ತ ನೋಡಿ 'ಯಾವಾಗ್ ಆಗಿದ್ದು ಗಾಯ? ಗಾಯ ಆದ್ಮೇಲೆ ತಲೆ ನೋವು, ಮಾತಿನ್ ಮೇಲೆ ಹಿಡಿತ ತಪ್ಪೋದು ಈ ಥರ ಎಲ್ಲಾ ಆಗ್ತಿದ್ಯಾ?' ಎಂದು ಕೇಳಿದರು. ಸಂದೀಪ ಬೇಸರದಲ್ಲಿ 'ಒಂದೂವರೆ ತಿಂಗ್ಳಾಯ್ತು ಸರ್, ಗಾಯ ಆದಾಗ ನಿಮ್ ಹತ್ರಾನೇ ಬಂದಿದ್ದೆ, ರೇಬಿಸ್ ಇಂಜೆಕ್ಷನ್ ಕೊಟ್ಟಿದೀರಾ ಆವಾಗ್ಲೇ' ಎಂದು ಉಸುರಿದ. ವೈದ್ಯರು ಗಂಭೀರವಾಗಿ 'ಹೂಂ, ಜನ ಜಾಸ್ತಿ ಅಲ್ವಾ, ಮರ್ತಿರ್ತೀನಿ, ಹಿಮೋಗ್ಲೋಬಿನ್ ಸ್ವಲ್ಪ ಕಮ್ಮಿ ಇದೆ, ಅದ್ಕೇ ಗುಣ ಆಗೋದ್ ಲೇಟ್ ಆಗ್ತಿರ್ಬೋದು, ಕಾಡ್ ಬೆಕ್ಕಿರ್ಬೇಕು – ಸ್ವಲ್ಪ ಇನ್ಫೆಕ್ಷನ್ ಜಾಸ್ತಿ ಇದೆ, ತಲೆ ಕೆಡಿಸ್ಕೋಬೇಡಿ, ಬೇರೆ ಸಮಸ್ಯೆ ಏನಿಲ್ಲ' ಎಂದು ನಾಲ್ಕೈದು ವಿಟಮಿನ್ ಮತ್ತು ಆಂಟಿಬಯಾಟಿಕ್ ಮಾತ್ರೆ, ಹಿಮೋಜಿಂಕ್ ಟಾನಿಕ್ ಬರೆದು ಕೊಟ್ಟರು. ಸಂದೀಪ ಎದ್ದು ಹೊರಡುವಾಗ 'ಬರೀ ನಲವತ್ತು ಕೆಜಿ ಇದೀರಾ ಸಂದೀಪ್, ನಿಜ್ವಾಗ್ಲೂ ಹಾಸ್ಟೆಲಲ್ಲಿ ಊಟ ಚೆನಾಗಿದ್ಯಾ?' ಎಂದು ಕಾಳಜಿಯ ನೋಟ ಬೀರಿದರು. ಸಂದೀಪ ಅವರ ಅಕ್ಕರೆಗೆ ಭಾವುಕನಾಗಿ ಇನ್ನೇನು ಕಣ್ಣೀರಾಗಬೇಕೆನ್ನುವಷ್ಟರಲ್ಲಿ ವೈದ್ಯರು ಇಡೀ ಕ್ಲಿನಿಕ್ ನಡುಗುವಂತೆ 'ನೆಕ್ಸ್ಟ್ ಯಾರು, ಬನ್ನೀ' ಎಂದು ಅಬ್ಬರಿಸಿದರು. ಸಂದೀಪನಿಗೆ ಮೂರು ಗೀರಿನ ಗಾಯ ಒಮ್ಮೆಗೇ ನೋವಾದಂತಾಯಿತು. ಅವತ್ತು ಅರಿಹಂತ ಕೂಡಾ ಇದೇ ಸ್ವರದಲ್ಲಿ ಕೂಗಿದ್ದು ಎಂದು ನೆನಪಾಗಿ ನಿಂತಲ್ಲೇ ಕಂಪಿಸಿದ.

'ರ್‍ಯಾಗಿಂಗ್ ಗೀಗಿಂಗ್ ಎಲ್ಲಾ ಇಲ್ಲಮ್ಮಾ, ಸೀನಿಯರ್ಸ್ ಎಲ್ಲಾ ಸಿಕ್ಕಾಪಟ್ಟೆ ಒಳ್ಳೆಯೋರು, ಡೈಲಿ ಬೆಳಗ್ಗೆ ಮುಂಚೆ ಸಂಧ್ಯಾವಂದನೆ ಎಲ್ಲಾ ಮಾಡ್ತಾರೆ ಗೊತ್ತಾ, ಆಮೇಲೆ ಡೈಲಿ ಬೆಳಗ್ಗೆ ಒಂದೊಂದ್ ತಿಂಡಿ... ಎಂದು ಸಂದೀಪ ಮೇಲ್ಮಹಡಿಯ ಕಾರಿಡಾರಿನಲ್ಲಿ ನಿಂತು ಹಾಸ್ಟೆಲ್ಲಿನ ಮೇಲಿರುವ ಚಂದ್ರನನ್ನು ನೋಡುತ್ತಾ ಅಮ್ಮನಿಗೆ ದೈನಂದಿನ ವರದಿ ಒಪ್ಪಿಸುತ್ತಿರುವಾಗಲೇ